ಒ ಎಸ್ ನಂ.290/2012
ಪಿ.ಡಬ್ಲ್ಯೂಃ 2 ಹಾಜರು

ದಿನಾಂಕಃ 12-07-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀ ಸವಾಲು ಶ್ರೀಯುತ ಎಸ್ ಸಿ ಜಿ ವಕೀಲರಿಂದಃ
**( 10** ನೇ ಪ್ರತಿವಾದಿಯ ಪರವಾಗಿ**)**

ನನಗೆ 10 ಪ್ರತಿವಾದಿಯ ಪರಿಚಯ 15-20 ವರ್ಷದಿಂದ ಪರಿಚಯ. ಆತ ಯಾವ ಯಾವ ಉದ್ಯೋಗ ಮಾಡುತ್ತಿದ್ದ ಎಂಬ ಬಗ್ಗೆ ನನಗೆ ಮಾಹಿತಿ ಇದೆ. 10 ನೇ ಪ್ರತಿವಾದಿ ಮೊದಲು ರಿದ್ದಿ-ಸಿದ್ದಿ ಪ್ಯಾಕ್ಟರಿಯಲ್ಲಿ ಕಚ್ಚಾ ಮಾಲನ್ನು ಖರೀದಿಸಿ ಪಶು ಆಹಾರ ತಯಾರಿಸಿ ಮಾರಾಟ ಮಾಡುತ್ತಿದ್ದರು ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಆತ ದೇವಾಂಗ ಸಮಾಜದ ಅಂಗಡಿ ಬಾಡಿಗೆ ತೆಗೆದುಕೊಂಡಿದ್ದರು. ಆತ ಸದರಿ ಅಂಗಡಿಯಲ್ಲಿ ನ್ಯೂ ದೆಲ್ಲಿ ಅಪೆರೆಸ್ಸ ಅಂಗಡಿ ಹೆಸರಿನಲ್ಲಿ ಬಟ್ಟೆಗಳನ್ನು ಮಾರಾಟ ಮಾಡುತ್ತಾರೆ ಎಂದರೆ ಸರಿ. 10 ನೇ ಪ್ರತಿವಾದಿ ಸದರಿ ದುಡಿಮೆಯಿಂದ ಪ್ಲಾಟ್ ನಂ.36 ಸರ್ವೆ ನಂ.202/2 ಎ+2 ಬಿ ಯನ್ನು 2,38,000/- ಕ್ಕೆ ದಿನಾಂಕಃ 04-11-2004 ರಲ್ಲಿ ಖರೀದಿ ಮಾಡಿದ್ದಾನೆ ಎಂದರೆ ಸರಿ. ಸದರಿ ಪ್ಲಾಟ್‌ನ ಮೇಲೆ 10 ನೇ ಪ್ರತಿವಾದಿ ಈಗ ಕಟ್ಟಡ ಕಟ್ಟಲು 50 ಲಕ್ಷ ರೂ. ಸಾಲ ಮಾಡಿರಬಹುದು ಎಂದರೆ ಇರಬಹುದು .ದಸಿ ಟಿ ಎಸ್ ನಂ.3301 ಬಿ2/ಎ ಯನ್ನು 10 ನೆ ಪ್ರತಿವಾದಿಯ ಅಣ್ಣ ತಮ್ಮಂದಿರು ದಿನಾಂಕಃ 17-03-2005 ರಂದು ವಾಟ್ನಿ ಪತ್ರದ ಮುಖಾಂತರ ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ 10 ನೇ ಪ್ರತಿವಾದಿ ದೇಹಲಿ ಬೆಸ್ಟ ಕಲೆಕ್ಷನ ರೇಡಿಮೆಡ ಅಂಗಡಿಯನ್ನು ನಡೆಸುತ್ತಾರೆ ಎಂದರೆ ಸರಿ. ಸದರಿ ಎರಡೂ ಆಸ್ತಿಗಳು ಮೇಲೆ 10 ನೇ ಪ್ರತಿವಾದಿ ಸರಕಾರಕ್ಕೆ ಸಂಬಂಧಪಟ್ಟ ಎಲ್ಲ ತೆರಿಗೆಗಳನ್ನು ನೀಡುತ್ತಾ ಕಬ್ಜೆ ಹೊಂದಿರುತ್ತಾರೆ ಎಂದರೆ ಸರಿ.

ವಾದಿ ಮತ್ತು ಪ್ರತಿವಾದಿಗಳು ಕುಟುಂಬಕ್ಕ 4 ಕೃಷಿ ಭೂಮಿಗಳು ಇದ್ದ. ಈ ದಾವೆ ಚಾಲ್ತಿಯಲ್ಲಿದ್ದಾಗ ವಾದಿ 2 ಜಮೀನುಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಒಂದು ಜಮೀನು ವಾದಿ ಮತ್ತು ಇನ್ನೊಂದು 2 ನೇ ಪ್ರತಿವಾದಿ ಮಾರಾಟ ಮಾಡಿದ್ದಾರೆ ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರೆದ ಸದರಿ ಕ್ರಯ ಪತ್ರದ ಹಣವನ್ನು ಎಲ್ಲರೂ ಕೂಡಿ ಹಂಚಿಕೊಂಡಿದ್ದಾರೆಂದು ನುಡಿದಿರುತ್ತಾರೆ. ಸದರಿ ಆಸ್ತಿಯ ಖರೀದಿ ಪತ್ರಕ್ಕೆ ವಾದಿ ಮತ್ತು 2 ನೇ ಪ್ರತಿವಾದಿ ಮಾತ್ರ ಸಹಿ ಮಾಡಿದ್ದಾರೆ ಎಂದರೆ ಸರಿ. ಸದರಿ ಆಸ್ತಿಗಳನ್ನು ಎಷ್ಟು

ಹಣಕ್ಕೆ ಮಾರಾಟ ಮಾಡಲಾಗಿದೆ ಎಂಬುದನ್ನು ನನಗೆ ಹೇಳಲು ಬರುವುದಿಲ್ಲ. ಆಸ್ತಿಗಳ ಮಾರಾಟದಿಂದ ಬಂದ ಹಣವನ್ನು ಯಾರು ಯಾರು ಮತ್ತು ಎಷ್ಟೇಷ್ಟು ಹಂಚಿಕೊಂಡಿದ್ದಾರೆಂದು ನನಗೆ ಹೇಳಲು ಬರುವುದಿಲ್ಲ. ಸದರಿ ಎರಡೂ ಆಸ್ತಿಗಳನ್ನು ಮಾರಾಟ ಮಾಡಬಾರದು ಎಂದು ಹೇಳಿ ವಾದಿ ಮತ್ತು 2 ನೇ ಪ್ರತಿವಾದಿಯ ಮೇಲೆ ಮನಾಯಿ ಆದೇಶ ಇತ್ತು ಎಂದರೆ ಸರಿ. ಸಿ ಟಿ ಎಸ್ ಸಂಖ್ಯೆ 3301/ಬಿ2/ಎ ಹಾಗೂ ಪ್ಲಾಟ್ ಸಂಖ್ಯೆ 36 10 ನೇ ಪ್ರತಿವಾದಿಯ ಸ್ವಂತ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ವಾದಿ ಮಾಡಿದ ತಪ್ಪನ್ನು ಮುಚ್ಚಿ ಹಾಕಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ

15 ರಿಂದ 18 ನೇ ಪ್ರತಿವಾದಿಗಳು ಪರ ವಕೀಲರ ತಮ್ಮ ಪರವಾಗಿ ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ. ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

11 ರಿಂದ 14 ನೇ ಪ್ರತಿವಾದಿಗಳ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು ಪ್ರತಿನಿಧಿಸಿಲ್ಲ, ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಶ್ರೀ ಎಸ್ ಎಸ್ ಟಿ ವಕೀಲರು ಪ್ರತಿವಾದಿ ನಂ.2 ರಿಂದ 5 ಹಾಗೂ 7 ರಿಂದ 9 ಪರವಾಗಿ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ. ಆಲಿಸಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ